ಸಾಕ್ಷಿಯನ್ನು ದಿನಾಂಕ **14-02-2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು .

ಪಾಟೀ ಸವಾಲುಃ- ವಾದಿ ಪರ ಶ್ರೀ ಎಸ್.ಎನ್.ಆರ್.ಎಸ್. ವಕೀಲರಿಂದ

ನನಗೆ ಈ ದಾವೆಯನ್ನು ಯಾವ ಕಾರಣಕ್ಕಾಗಿ ಮತ್ತು ಏನು ಪರಿಹಾರವನ್ನು ಕೇಳಿ ಸಲ್ಲಿಸಲಾಗಿದೆ ಎಂದು ಗೊತ್ತಿಲ್ಲ.

ಈ ದಾವೆಯಲ್ಲಿ ನನ್ನ ತಾಯಿಯಾದ **6** ನೇ ಪ್ರತಿವಾದಿ ಸಲ್ಲಿಸಿದ ಪ್ರತಿವಾದ ಪತ್ರದ ಬಗ್ಗೆ ನನಗೆ ತಿಳಿದಿದೆ.  ಸದರಿ ಪ್ರತಿವಾದ ಪತ್ರಕ್ಕೆ ನಮ್ಮ ವಕೀಲರು ಮಾಹಿತಿ

ಕೊಟ್ಟಿದ್ದಾರೆ. ಆ ಕಾರಣಕ್ಕಾಗಿ ಅದರಲ್ಲಿ ಬರೆದ ವಿಷಯದ ಬಗ್ಗೆ ನನಗೆ ಮಾಹಿತಿ ಇಲ್ಲಾ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ನಾನು ಮತ್ತು ನನ್ನ ತಾಯಿ ಇಬ್ಬರೂ ಮಾಹಿತಿ ಕೊಟ್ಟಿರುತ್ತೇವೆ. ಈ ದಾವೆಯ ವಾದ ಪತ್ರದಲ್ಲಿ ವಾದಿ ಬರೆದ ಒಕ್ಕಣಿಕೆಗಳ ಬಗ್ಗೆ ನನಗೆ ತಿಳಿದಿಲ್ಲ. ಸಾಕ್ಷಿಗೆ ನೀವು ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳನ್ನು ಸರ್ಮಥಿಸಿಕೊಳ್ಳಲು ಯಾವುದೇ ದಾಖಲೆ ಇಲ್ಲ ಎಂದು ಮೂರು ಬಾರಿ ಕೇಳಿದರೂ ಸಾಕ್ಷಿ ಕಟಕಟೆಯಲ್ಲಿ ಸುಮ್ಮನೆ ನಿಂತಿರುತ್ತಾರೆ.

ಜಮೀನು ಸರ್ವೇ ಸಂಖ್ಯೆ **38** ಸೂರ್ಯ ನಾರಾಯಣ ಭಟ್ ರಿಗೆ ಸೇರಿದ ಜಮೀನು ಆಗಿರುತ್ತದೆ. ಸದರಿ ವಿಷಯ ನನಗೆ ಈ ದಾವೆ ದಾಖಲಿಸಿದಾಗ **2020** ರಲ್ಲಿ ಗೊತ್ತಾಗಿರುತ್ತದೆ.

ಸುಳುಗೋಡು ಗ್ರಾಮದಲ್ಲಿ ಡಿ.ಆರ್. ಸಂಖ್ಯೆ **155** ರಲ್ಲಿ ನನಗೆ ಸೇರಿದ ಸ್ವಂತ ಮನೆ ಇರುವುದು ನಿಜ. ಸದರಿ ಮನೆ ಜಮೀನು ಸರ್ವೇ ಸಂಖ್ಯೆ **38** ರ ವ್ಯಾಪ್ತಿಯ ಹೊರಗೆ ಇರುವುದು ನಿಜ. ನಾನು ಸದರಿ ಮನೆಯಲ್ಲಿ ವಾಸ ಮಾಡುವುದು ನಿಜ.

ಸಾಕ್ಷಿಗೆ ಜಮೀನು ಸರ್ವೇ ಸಂಖ್ಯೆ **38** ರಲ್ಲಿ ಯಾವ ದಿನಾಂಕದಿಂದ ವಾಸ ಮಾಡುತ್ತಿದ್ದೀರಿ ಎಂದು ಕೇಳಿದಾಗ **1988** ರಿಂದ ನನ್ನ ತಾಯಿ ಅಲ್ಲಿ ವಾಸ ಮಾಡುತ್ತಿದ್ದು ಅದಕ್ಕೂ ಪೂರ್ವದಲ್ಲಿ ನನ್ನ ತಂದೆ ಅಲ್ಲಿ ವಾಸ ಮಾಡುತ್ತಿದ್ದರು ಎಂದು

ನುಡಿಯುತ್ತಾರೆ. ನನಗೆ ದಿನಾಂಕವನ್ನು ನಿಖರವಾಗಿ ಹೇಳಲಾಗುವುದಿಲ್ಲ. ಸದರಿ ಮನೆಯಲ್ಲಿ **1988** ರಿಂದ ವಾಸ ಮಾಡುತ್ತಿದ್ದೇವೆ ಎಂದು ಪೋಲೀಸರು ಸ್ವತ್ತಿಗೆ ಸಂಬಂಧಿಸಿದ ಡಿ.ಆರ್. ಮಾತ್ರ ಇದೆ. ಸದರಿ ಜಮೀನಿನಲ್ಲಿ **55** ಅಡಿ ಅಗಲ ಹಾಗೂ **150** ಅಡಿ ಉದ್ದ ಮನೆಯಲ್ಲಿ ವಾಸ ಮಾಡುತ್ತಿದ್ದೇವೆ. ಸದರಿ ಸ್ವತ್ತಿಗೆ ಸಂಬಂಧಿಸಿದ ಡಿ.ಆರ್. ಸಂಖ್ಯೆಯ ದಾಖಲೆಯನ್ನು ಈ ದಾವೆಯಲ್ಲಿ ಹಾಜರು ಪಡಿಸಿದ್ದೇನೆ. ನನಗೆ ಸದರಿ ಮನೆಯ ಚೆಕ್ಕುಬಂಧಿ ಗೊತ್ತಿಲ್ಲ.

ಈ ದಾವೆಯಲ್ಲಿ ವಾದಿಯರು ಸಲ್ಲಿಸಿದ ಹದ್ದು ಬಸ್ತು ನಕಾಶೆಯನ್ನು ನಾನು ನೋಡಿ ತಿಳಿದುಕೊಂಡಿದ್ದೇನೆ. ಅದರಲ್ಲಿ ನನ್ನ ತಾಯಿ ವಾಸ ಮಾಡುವ ಸ್ಥಳವನ್ನು ನನಗೆ ಗುರುತಿಸಲು ಆಗುವುದಿಲ್ಲ.

ಈ ದಾವೆಯಲ್ಲಿ ನಮೂದಿಸಲಾದ ಎ ಮತ್ತು ಬಿ ಅನುಸೂಚಿ ಸ್ವತ್ತುಗಳ ಬಗ್ಗೆ ನನಗೆ ಗೊತ್ತಿಲ್ಲ.

ನಿ.ಡಿ.**-33** ರಿಂದ **39** ಪಂಚಾಯಿತ ನೀಡಿದ ರಶೀದಿ ಎಂದರೆ ಸರಿ. ಸದರಿ ದಾಖಲೆಗಳಲ್ಲಿ ಅಂಗಡಿ ಮತ್ತು ಮನೆಯ ಕಂದಾಯವನ್ನು ಪಾವತಿ ಮಾಡಿದ್ದೇವೆ. ಸಾಕ್ಷಿಗೆ ನಿ.ಡಿ.**-34, 36** ಹಾಗೂ **37** ತೋರಿಸಿ ಅವುಗಳಲ್ಲಿ ಯಾವ ಕಂದಾಯವನ್ನು ಪಾವತಿ ಮಾಡಲಾಗಿದೆ ಎಂದು ನಿಖರವಾಗಿ ನಮೂದಿಸಿಲ್ಲ ಎಂದರೆ ಸಾಕ್ಷಿ ನಿಜ ಎಂದು ನುಡಿಯತ್ತಾರೆ. ಸದರಿ ದಾಖಲೆಗಳಲ್ಲಿ ಅಂಗಡಿಯ ಕಂದಾಯವನ್ನು ಕಟ್ಟಡ ಬಾಬ್ತು ಪಾವತಿಸಲಾಗಿದೆ.

ನಿ.ಡಿ.-40 ಹಾಗೂ 41 ಎಂದು ಗುರುತಿಸಿದ ವಹಿಯ ದೃಢೀಕೃತ ಪ್ರತಿಗಳಲ್ಲಿ ಸ್ವತ್ತಿನ ವಿಸ್ತೀರ್ಣವನ್ನು ನಿಖರವಾಗಿ ನಮೂದಿಸಿಲ್ಲ ಎಂದರೆ ಸರಿ. ನಾನು ನಮ್ಮ ಸ್ವಾಧೀನದಲ್ಲಿರುವ ಸ್ವತ್ತು ವಿಸ್ತೀರ್ಣವನ್ನು ರುಜುವಾತು ಪಡಿಸಲು ಸದರಿ ದಾಖಲೆಯನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲೆ ನೀಡಿಲ್ಲ.

2020 ರ ಪೂರ್ವದಲ್ಲಿ ಜಮೀನು ಸರ್ವೇ ಸಂಖ್ಯೆ38 ಯಾರಿಗೆ ಸೇರಿತ್ತು ಎನ್ನುವ ಬಗ್ಗೆ ನನಗೆ ಗೊತ್ತಿರಲಿಲ್ಲ.

ಈ ದಾವೆಯ ವಾದ ಪತ್ರದಲ್ಲಿ ದಾವಾ ಸ್ವತ್ತು ಹದ್ದು ಬಸ್ತು ಆದಾಗ ಮತ್ತು ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ನಡೆದ ಪ್ರಕರಣಗಳ ಬಗ್ಗೆ ಉಲ್ಲೇಖ ಇರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ದಾವೆಯಲ್ಲಿ ವಾದಿ ಸಲ್ಲಿಸಿದ ದಾಖಲೆಗಳ ಬಗ್ಗೆ ನಾನು ತಿಳಿದುಕೊಂಡಿಲ್ಲ. ಸದರಿ ವಾದ ಪತ್ರದ ಬಗ್ಗೆ ಮತ್ತು ದಾಖಲೆಗಳ ಬಗ್ಗೆ ನನ್ನ ವಕೀಲರ ಮೂಲಕ ತಿಳಿದುಕೊಳ್ಳಲು ನನಗೆ ಯಾವುದೇ ತೊಂದರೆ ಇರಲಿಲ್ಲ.

ನನಗೆ ಈ ದಾವೆಯ ಬಗ್ಗೆ ಮತ್ತು ದಾವಾ ಸ್ವತ್ತಿನ ಬಗ್ಗೆ ಹಾಗೂ ದಾವೆಯಲ್ಲಿ ಸಲ್ಲಿಸಿದ ದಾಖಲೆಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ದಾವಾ ಸ್ವತ್ತನ್ನು ಹದ್ದು ಬಸ್ತು ಮಾಡಿಸಿದ ನಂತರ ಅನಧಿಕೃತ ಸ್ವಾಧೀನವನ್ನು ಬಿಟ್ಟುಕೊಡುವಂತೆ ನನ್ನ ತಾಯಿಗೆ ಕೇಳಿದಾಗ ನಾವು ಸ್ಪಂದಿಸಿಲ್ಲ ಎಂದರೆ ಸಾಕ್ಷಿ ನಮಗೆ ವಾದಿ ಕೇಳಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ವಾದಿ ಈಗ ಬಂದು ಕೇಳಿದರೆ

ನೀವು ಸ್ವತ್ತನ್ನು ಬಿಟ್ಟುಕೊಡುತ್ತೀರ ಎಂದು ಕೇಳಿದಾಗ ಸಾಕ್ಷಿ ನಾವು ತುಂಬಾ ವರ್ಷಗಳಿಂದ ಅಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ. ಜಮೀನು ಸರ್ವೇ ಸಂಖ್ಯೆ **38** ರಲ್ಲಿ ವಾಸ ಮಾಡಲು ನನಗಾಗಲಿ ನನ್ನ ತಾಯಿಗಾಗಲಿ ಯಾವುದೇ ಹಕ್ಕು ಇಲ್ಲದೇ ಇದ್ದರೂ ವಾದಿಗೆ ತೊಂದರೆ ಕೊಡಬೇಕು ಎನ್ನುವ ಉದ್ದೇಶದಿಂದ ಸುಳ್ಳು ಹೇಳಿಕೆಗಳನ್ನು ನಮೂದಿಸಿ ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಹೊರಭಾಗದಲ್ಲಿ ನಮಗೆ ಸಂಬಂಧಿಸಿದ ಸ್ವಂತ ಮನೆ ಇದ್ದರೂ ವಾದಿಗೆ ತೊಂದರೆ ಕೊಡಬೇಕು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ- ಇಲ್ಲ.</u>

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನು ನನ ಉಕ್ತಲೇಖನದ ರೀತ್ಯಾ ಮುಕ್ತ ನ್ಯಾಯಾಲಯದಲ್ಲಿ ಗಣಕೀಕರಿಸಲಾಯ್ತು.)**

**(ಸಾಕ್ಷಿಗೆ ಓದಿ , ತಿಳಿಸಿ ಹೇಳಿದಾಗ, ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ .)**

(ಸಂತೋಷ್ ಎಂ.ಎಸ್. )
ಹಿರಿಯ ವ್ಯವಹಾರ ನ್ಯಾಯಾಧೀಶರು,
ಹೊಸನಗರ .

O.S. 8/2020
D.W.-2